**ದಿನಾಂಕ 04-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**
**ಮುಂದುವರಿದ ಪಾಟೀ ಸವಾಲು - 1 ಮತ್ತು 6 ನೇ ಪ್ರತಿವಾದಿಯರ ಪರ ವಕೀಲರಿಂದಃ**

ನನ್ನ ತಂದೆ ಸಿಂಡಿಕೇಟ್ ಬ್ಯಾಂಕ್ ನಲ್ಲಿ ಕೆಲಸದಲ್ಲಿ ಇದ್ದರು ಎಂದರೆ ಸರಿ . ಅವರು ನವೆಂಬರ್ 1994 ರಂದು ನಿವೃತ್ತಿ ಹೊಂದಿದರು ಎಂದರೆ ಸರಿ . ನನ್ನ ತಂದೆ ನಿವೃತ್ತಿ ಹೊಂದುವಾಗ ಅವರು ರೂ 10000/- ಸಂಭಳ ವನ್ನು ಮಾತ್ರ Take home salary ಆಗಿ ಪಡೆಯುತಿದ್ದರು ಎಂದರೆ ಗೊತ್ತಿಲ್ಲ . ನನ್ನ ತಂದೆ ನಿವೃತ್ತಿ ಆದಾಗ ರೂ 1,55,000 ಮಾತ್ರ Retirement benefit ಬಂದಿರುತ್ತದೆ ಎಂದರೆ ಗೊತ್ತಿಲ್ಲ . ನನ್ನ ತಂದೆ ನಿವೃತ್ತಿ ಆಗುವಾಗ ಅವರ ಹೆಸರಿನಲ್ಲಿ deposit ಇತ್ತೋ ಇಲ್ಲವೋ ಗೊತ್ತಿಲ್ಲ .ನಿಮ್ಮ ತಂದೆಗೆ ಪಿರ್ತಾಜಿತ ಆಸ್ತಿ ಇತ್ತಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಊರಿನಲ್ಲಿ ಸ್ವಲ್ಪ ಇತ್ತು ಎಂದು ತಿಳಿಸಿರುತ್ತಾರೆ. ಅಮಾಸೆಬೈಲಿನ ಆಸ್ತಿಯನ್ನು ನನ್ನ ತಂದೆ 1992 ರಲ್ಲಿ ಮಾರಾಟ ಮಾಡಿರುತಾರೆ . ನನ್ನ ಪಿಜ್ಜ (ಅಜ್ಜನ ತಂದೆ) ನ ಹೆಂಡತಿಯ ಹೆಸರು ಗೊತ್ತಿಲ್ಲ . ಪಿಜ್ಜನ ಹೆಂಡತಿಯ ತಾಯಿಯ ಹೆಸರು ನನಗೆ ಗೊತ್ತಿಲ್ಲ. ಹಿರಿಯರ ತಲೆಮಾರಿನಲ್ಲಿ ಅಮಾಸೆಬೈಲಿನ ಆಸ್ತಿಗಳ ಬಗ್ಗೆ ಏನೆಲ್ಲಾ ದಾಖಲೆಗಳು ಆಗಿದೆ ಎಂದು ನನಗೆ ತಿಳಿದಿಲ್ಲ. ಯಾರ ಯಾರ ನಡುವೆ ಎಷ್ಟು ವಿಭಾಗಪತ್ರಗಳು ಆಗಿದೆ ಎಂದು ನನಗೆ ನೆನಪಿಲ್ಲ. ಆ ವಿಭಾಗಪತ್ರಗಳನ್ನು ನಾನು ನೋಡಿಲ್ಲ . ಕೊನೆಯಾದಾಗಿ ಏನು ದಾಖಲೆ ಆಗಿದೆ ಎಂದು ನನಗೆ ಗೊತ್ತಿಲ್ಲ . ಅಮಾಸೆಬೈಲಿನ ಆಸ್ತಿಗಳನ್ನು 1992 ರಲ್ಲಿ ರೂ 1,96,000 ಗಳಿಗೆ ನಿಪಿ-60 ರ ಪ್ರಕಾರ ಮಾರಾಟ ಮಾಡಲಾಗಿದೆ ಎಂದರೆ ಸಾಕ್ಷಿ ರೂ 11,00,000 ಕ್ಕೆ ಮಾರಾಟ ಮಾಡಲಾಗಿದೆ

ಆದರೇ ತೋರಿಸಿರುವುದು ಮಾತ್ರ 1,96,000 ಮಾತ್ರ ಎಂದು ತಿಳಿಸಿರುತ್ತಾರೆ . ಆಗ ನಾನು ದಾಖಲೆಗೆ ಸಹಿ ಮಾಡಿದ್ದೆನೋ ಇಲ್ಲವೋ ಎಂದು ನೆನಪಿಲ್ಲ. ಆಗ ನನಗೆ 14 ವರ್ಷ ವಯಸ್ಸು. ರೂ 11,00,000 ಕ್ಕೆ ಮಾರಾಟ ಮಾಡಲಾಗಿದೆ ಎಂದು ನನ್ನ ತಂದೆ ಮತ್ತು ತಾಯಿ ನನಗೆ ಹೇಳಿರುತಾರೆ. ನನ್ನ ವಾದಪತ್ರದಲ್ಲಿ , ಮುಖ್ಯವಿಚಾರಣೆಯ ಪ್ರಮಾಣ ಪತ್ರದಲ್ಲಿ ಅಮಾಸೆಬೈಲಿನ  ಆಸ್ತಿ ರೂ 11,00,000 ಕ್ಕೆ ಮಾರಾಟ ಮಾಡಲಾಗಿದೆ ಎಂದು ಹೇಳಿದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ  ಮಾರಾಟ ಆಗಿದೆ ಎಂದು ಹೇಳಿರುತ್ತೇವೆ ಹಣ ನಮೂದು ಮಾಡಿಲ್ಲ ಎಂದು ತಿಳಿಸಿರುತಾರೆ. ನಿಪಿ-60 ನ್ನು ನಾನು ಸಂಪೂರ್ಣವಾಗಿ ಓದಿಲ್ಲ. ಅಮಾಸೆಬೈಲಿನ ಆಸ್ತಿಯನ್ನು ಮಾರಾಟ ಮಾಡುವ ಸಮಯದಲ್ಲಿ ಅಲ್ಲಿ ಇದ್ದ ಮನೆ 10 ವರ್ಷ ಹಳೆಯ ಮನೆಯಾಗಿತ್ತು . ಅದು ಎಷ್ಟು ವಿಸ್ತಾರದ ಮನೆ ಎಂದು ಗೊತ್ತಿಲ್ಲ . ನಿಪಿ 60 ರಲ್ಲಿ ಸುಮಾರು 50 ವರ್ಷ ಹಳೆಯ ಕಲ್ಲು ಮಣ್ಣು  ಗೋಡೆಯ  8 ಚದರಡಿ ವಿಸ್ತೀರ್ಣದ ಹಳೆಯ ಮನೆ ಕುಗ್ರಾಮದಲ್ಲಿ ಇರುವುದರಿಂದ ಮತ್ತು ಯಾವುದೇ ಆದಾಯ ಇಲ್ಲದೇ ಇರುವುದರಿಂದ ಎಂದು ಬರೆಯಲಾಗಿದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ  ಮುಂದ್ರಾಂಕ ಶುಲ್ಕ ಕಡಿಮೆ ತೋರಿಸಲು ಆ ರೀತಿ ಬರೆಯಲಾಗಿದೆ ಎಂದು ತಿಳಿಸಿರುತಾರೆ. ನಮ್ಮ ತಂದೆ ಈ ರೀತಿ ಮಾತನಾಡಿಕೊಳ್ಳುತಿದ್ದು ನನಗೆ ಕೇಳಿಸಿತ್ತು . ಕ್ರಯಪತ್ರ ಆಗುವಾಗ ನಾನು ಅಲ್ಲಿ ಇದ್ದೆ . ನನ್ನ ತಂದೆಗೆ ನಗದಿನ ರೂಪದಲ್ಲಿ ಮತ್ತು ಚೆಕ್ ಮುಖೇನ ಹಣ ಸಂದಾಯವಾಗಿದೆ ಆದರೇ ಸರಿಯಾಗಿ ನೆನಪಿಲ್ಲ . ಆಸ್ತಿಯನ್ನು ಏಕೆ ಮಾರಾಟ ಮಾಡಲಾಗುತಿದೆ ಎಂದು ನಿಮ್ಮ ತಂದೆ ಹೇಳಿದ್ದಾರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ  ನೋಡಿಕೊಳ್ಳಲು ಕಷ್ಟ ವಾಗುತ್ತದೆ ಎಂದು

ಹೇಳಿದ್ದರು . ಆಗ ನಮ್ಮ ಅಕ್ಕ 4 ನೇ ಪ್ರತಿವಾದಿ ಮದುವೆ ವಯಸ್ಸಿಗೆ ಬಂದಿದ್ದರು ಎಂದರೆ ಸರಿ . ನಾವು ವಿದ್ಯಾಬ್ಯಾಸ ಮಾಡುತಿದ್ದೆವು ಎಂದರೆ ಸರಿ. ನಿಪಿ 60 ರಲ್ಲಿ ಯಾವ ಕಾರಣಕ್ಕಾಗಿ ಮಾರಾಟ ಮಾಡಲಾಗಿದೆ ಎಂದು ಬರೆದಿರುವುದನ್ನು ನೋಡಿದಿರಲ್ಲವೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನೋಡಿಲ್ಲ ಎಂದು ತಿಳಿಸಿರುತಾರೆ . ಅಮಾಸೆಬೈಲಿನ ಆಸ್ತಿಗಳಿಂದ ಆದಾಯ ತುಂಬಾ ಕಡಿಮೆ ಇರುವುದರಿಂದ ಮತ್ತು ನಮ್ಮ ವಿದ್ಯಾಬ್ಯಾಸಕ್ಕೆ ಹಣಕಾಸಿನ ಅವಶ್ಯಕತೆ ಇರುವುದರಿಂದ ಮಾರಾಟ ಮಾಡಲಾಗಿದೆ ಎಂದು ಬರೆಯಲಾಗಿದೆ ಎಂದರೆ ಸರಿಯಲ್ಲ . ಕ್ರಯಪತ್ರ ವನ್ನು ನಾನು ನೋಡಿಲ್ಲ ಕ್ರಯಪತ್ರದಲ್ಲಿ ಆ ರೀತಿ ಬರೆದಿದ್ದರೇ ಅದು ಸುಳ್ಳು. ಅಮಾಸೆಬೈಲಿನ ಆಸ್ತಿಗಳು ಯಾವ ದಾಖಲೆ ಮುಖೇನ ಬಂದಿತು ಎಂದು ಗೊತ್ತಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಪಿತ್ರಾರ್ಜಿತ ಆಸ್ತಿ ಅದು ತಂದೆಯಿಂದ ಬಂದಿದೆ ಎಂದು ತಿಳಿಸಿರುತಾರೆ . ನಿಮ್ಮ ತಂದೆಯ ವಾರೀಸ ನೆಲೆಯಿಂದ ಬಂದಿತಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನೋಡಬೇಕು ಎಂದು ತಿಳಿಸಿರುತ್ತಾರೆ . ನಿಪಿ 60 ದಾಖಲೆ ಅಪಮೌಲ್ಯ ಆಗಿದೆ ಎಂದು ನಾನು ಪ್ರಾಪ್ತ ವಯಸ್ಕನಾದ ನಂತರ ನಾನು ದೂರನ್ನು ಕೊಟ್ಟಿಲ್ಲ . ನನ್ನ ತಂದೆ ನಿವೃತ್ತಿ ಆಗುವ 2 ವರ್ಷದ ಮೊದಲಿನ ವರೆಗೆ ನನ್ನ ತಂದೆ ಅದಾಯ ತೆರಿಗೆ ಇಲಾಖೆಗೆ ರಿಟನ್ಸ್ ಸಲ್ಲಿಸುತಿದ್ದರು, ತದನಂತರ ನನ್ನ ಅಣ್ಣ ಒಂದನೇ ಪ್ರತಿವಾದಿಯೇ ನನ್ನ ತಂದೆಯ ಸಹಿ ಪಡೆದು ನನ್ನ ತಂದೆಯ ರಿಟನ್ಸ್ ನ್ನು ಸಲ್ಲಿಸುತಿದ್ದರು . ನನ್ನ ತಂದೆ ನಿವೃತ್ತಿ ಆಗುವಾಗ ನನ್ನ ಅಣ್ಣ ಅಂತಿಮ ವರ್ಷದ ಎಂಬಿಬಿಎಸ್ ವ್ಯಾಸಾಂಗ ಮಾಡುತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಪಾಸ್ ಆದರೇ ಆಗ ಮಾತ್ರ ಎಂಬಿಬಿಎಸ್ ಎಂದು ಹೇಳಬಹುದು 1-2 ಪತ್ರಿಕೆಗಳನ್ನು ಬಾಕಿ ಉಳಿಸಿಕೊಂಡಿದ್ದರು

ಎಂದು ತಿಳಿಸಿರುತಾರೆ .ಸಾಕ್ಷಿ ಮುಂದುವರಿದು ಮೊದಲನೇ ಅಥವಾ ಎರಡನೇ ವರ್ಷದ ಎಂಬಿಬಿಎಸ್ ನಲ್ಲಿ ಬಾಕಿ ಉಳಿಸಿಕೊಂಡಿದ್ದರು. ನನ್ನ ಅಣ್ಣ ಎಂಬಿಬಿಎಸ್ ಪೂರ್ಣಗೊಳಿಸಿಲ್ಲ ಎನ್ನುವ ಬಗ್ಗೆ ದಾಖಲೆ ಕೊಡುತೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನನ್ನ ಅಣ್ಣನ ಬಳಿಯೇ ಇದೆ ಎಂದು ತಿಳಿಸಿರುತ್ತಾರೆ . ಎಷ್ಟು ಬಾರಿ ನಿಮ್ಮ ತಂದೆಯ ಐಟಿ ರಿಟರ್ನ್ಸ್ scrutiny ಗೆ ಆದಾಯ ತೆರಿಗೆ ಇಲಾಖೆಯಿಂದ ಬಂದಿದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನನ್ನ ಅಣ್ಣನನ್ನೇ ಕೇಳಬೇಕು ಎಂದು ತಿಳಿಸಿರುತ್ತಾರೆ . ನನ್ನ ತಂದೆ ಆದಾಯ ತೆರಿಗೆ ಅಧಿಕಾರಿಗಳ ಮುಂದೆ ಎಷ್ಟು ಬಾರಿ ಹಾಜರಾಗಿ ಹೇಳಿಕೆ ಕೊಟ್ಟಿರುತ್ತಾರೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನನ್ನ ಅಣ್ಣನನ್ನೇ ಕೇಳಬೇಕು ಎಂದು ತಿಳಿಸಿರುತ್ತಾರೆ. ಅಮಾಸೆಬೈಲಿನ ಆಸ್ತಿ ಮಾರಾಟ ಆಗುವಾಗ ನನ್ನ ಅಕ್ಕ ವಿನಯ ರವರ ಮದುವೆ ಆಗಿತ್ತೋ ಇಲ್ಲವೋ ನೆನಪಿಲ್ಲ, 1990-91 ರಲ್ಲಿ ಮದುವೆ ಆಗಿರಬಹುದು . ಅಮಾಸೆಬೈಲಿನ ಆಸ್ತಿ ಮಾರಾಟ ಮಾಡುವ ಸಮಯದಲ್ಲಿ ಎಷ್ಟು ಸಾಲ ನಿಮ್ಮ ತಂದೆಗೆ ಇತ್ತು ಎಂದು ಗೊತ್ತಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನನಗೆ ತಿಳಿದ ಮಟ್ಟಿಗೆ ಸಾಲ ಇರಲಿಲ್ಲ ಎಂದು ತಿಳಿಸಿರುತ್ತಾರೆ .ನನ್ನ ತಾಯಿಯ ಸೋದರ ಮಾವ ದೆಹಲಿಯಲ್ಲಿ ಇರುತಾರೆ ಎಂದರೆ ಸರಿ . ನನ್ನ ತಾಯಿಯ ಸೋದರ ಮಾವ ಅನೇಕ ಬಾರಿ ನನ್ನ ತಂದೆಗೆ ಸಾಲ ಕೊಟ್ಟಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನನ್ನ ಅಣ್ಣ ಎಂಬಿಬಿಎಸ್ ಮಾಡಲು ಅವರು ಸಹಾಯ ಮಾಡಿದ ಬಗ್ಗೆ ಗೊತ್ತಿತ್ತು ಎಂದು ತಿಳಿಸಿರುತ್ತಾರೆ . ನನ್ನ ಅಕ್ಕ ವಿನಯ ಮದುವೆಗೆ ಕೂಡ ನನ್ನ ತಾಯಿಯ ಸೋದರ ಮಾವ ನನ್ನ ತಂದೆಗೆ ಸಾಲ ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ . ನನ್ನ ತಾಯಿಯ ಸೋದರ ಮಾವ 22-07-

1992 ರಂದು ಸಾಲ ವಾಪಸ್ಸು ಕೊಡಿ ಎಂದು ಪತ್ರ ಬರೆದಿದ್ದರು ಎಂದರೆ ಸಾಕ್ಷಿ ನಾನು ಒಪ್ಪುವುದಿಲ್ಲ . ಸದ್ರಿ ಪತ್ರಕ್ಕೆ ನನ್ನ ತಂದೆ 05-08-1992 ರಂದು ಉತ್ತರ ಬರೆದಿದ್ದರು ಎಂದರೆ ಸಾಕ್ಷಿ ನನ್ನ ತಂದೆ ಬರೆದಿರುವ ರೀತಿ ಕಾಣುತ್ತಿಲ್ಲ ಎಂದು ತಿಳಿಸಿರುತ್ತಾರೆ . Indo American Hybrid seeds ನ ಮಾಲೀಕರಾದ ಡಾ ಮನಮೋಹನ್ ರವರು ನಮ್ಮ ತಂದೆಯ ಸ್ನೇಹಿತರು ಮತ್ತು ಸಹಪಾಟಿ ಎಂದರೆ ಸರಿ . ನನ್ನ ತಂದೆ ಡಾ ಮನಮೋಹನ್ ರವರಿಂದ ರೂ 100000 ಸಾಲ ಪಡೆದಿದ್ದರು ಎಂದರೆ ನನಗೆ ಗೊತ್ತಿಲ್ಲ . ndo American Hybrid seeds ನ ಪಾಲುದಾರ ಕೃಷ್ಣ ಭಟ್ ರರು ಕೂಡ ನಮ್ಮ ತಂದೆಯ ಸ್ನೇಹಿತರು ಎಂದರೆ ನನಗೆ ಗೊತ್ತಿಲ್ಲ . ಅವರಿಂದ ಕೂಡ ನನ್ನ ತಂದೆ ರೂ 50000 ಸಾಲ ಪಡೆದಿದ್ದರು ಎಂದರೆ ಗೊತ್ತಿಲ್ಲ . ನನ ತಂದೆ ಅಮಾಸೆಬೈಲಿನ ಆಸ್ತಿಯನ್ನು ಮಾರಾಟ ಮಾಡಿದ ನಂತರ ಬಂದ ಹಣದಿಂದ ಸದ್ರಿ ಸಾಲವನ್ನು ತೀರಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ . ನನ ತಂದೆ ಪ್ರಾಥಮಿಕ ಸಹಕಾರಿ ಬ್ಯಾಂಕ್ ಕುಂದಾಪುರ ದಿಂದ ಸಾಲ ಪಡೆದಿದ್ದರು ಎಂದರೆ ಗೊತ್ತಿಲ್ಲ . ನಿಪಿ 60 02-12-1992 ರಂದು ರೂ 55000 ನ್ನು ಮರುಪಾವತಿಸಿ ಆದಾರ ಪತ್ರವನ್ನು ಖುಲಾಸೆ ಮಾಡಿಸಿರುತಾರೆ ಎಂದರೆ ನನಗೆ ಗೊತ್ತಿಲ್ಲ . ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಅದರ ಬಗ್ಗೆ ನನಗೆ ಗೊತ್ತಿಲ್ಲ ಏನೋ ಬರೆದುಕೊಂಡಿದ್ದಾರೆ ಎಂದು ತಿಳಿಸಿರುತ್ತಾರೆ . ( ನೀವು ತೋರಿಸುವ ಯಾವುದೇ ದಾಖಲೆಗಳನ್ನು ನಾನು ಒಪ್ಪಲು ಸಾಧ್ಯವಿಲ್ಲ ಎಂದು ತಿಳಿಸಿರುತಾರೆ ). ಆದಾರ ಪತ್ರ ಮತ್ತು ಆ ದಿನ ಆದ ಕ್ರಯಪತ್ರಗಳ ಬಗ್ಗೆ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ Encumbrance certificate ನಲ್ಲಿ ನಮೂದು ಆಗಿದೆ

ಎಂದರೆ ನನಗೆ ಗೊತ್ತಿಲ್ಲ . ಸಾಕ್ಷಿಗೆ Certified ಆದಾರ ಪತ್ರ ಮತ್ತು Encumbrance certificate ತೋರಿಸಲಾಗಿ ಸಾಕ್ಷಿ ನಾನು ಇಲಾಖೆಯಿಂದ Certified copy ನ್ನು ತೆಗೆದು ನೋಡಬೇಕು ಎಂದು ತಿಳಿಸಿರುತ್ತಾರೆ . ಈಗ ತೋರಿಸಿದ ದಾಖಲೆಗಳು ಫೋರ್ಜರಿ ಎಂದು ಹೇಳುತೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನಾನು ಒಪ್ಪವುದಿಲ್ಲ ನಾನೇ ಇಲಾಖೆಯಿಂದ ತೆಗೆಯಿಸಿ ನೋಡಿ ಹೇಳಬೇಕು ಎಂದು ತಿಳಿಸಿರುತ್ತಾರೆ .

**ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ ಉಡುಪಿ.